# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 19 /2024

**ಚಾಸಾ ಃ- 02 / ಪ್ರಾಸಾ ಃ- 01**

| | |
|---|---|
| ಹೆಸರು | ರಾಮಪ್ಪ ಪಿ |
| ತಂದೆ ಹೆಸರು | ಪರಮೇಶ್ವರಪ್ಪ |
| ವಯಸ್ಸು | 35 |
| ಉದ್ಯೋಗ | ಸಹಶಿಕ್ಷಕರು, ಜಿ ಗೊಲ್ಲರಹಟ್ಟಿ |
| ವಿಳಾಸ | ಚಿಕ್ಕನಾಯಕನಹಳ್ಳಿ |

**ದಿನಾಂಕಃ 13.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 25.11.2019 ರಿಂದ 09.11.2023 ರ ವರೆಗೆ ಮಾಗಡಿ ವಲಯದಲ್ಲಿ ಅಬಕಾರಿ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25.09.2023 ರಂದು ಅಬಕಾರಿ ನಿರೀಕ್ಷಕರಾದ ಚಾಸಾ 7 ರವರು, ಹನುಮತ ಜಾಲಿಕಟ್ಟಿ(ಚಾಸಾ 1), ಮೋಹನ್‌ಕುಮಾರ್(ಚಾಸಾ3) ಮತ್ತು ಚೇತನ್ ಎಸ್(ಚಾಸಾ4) ಹಾಗೂ ಪಾಂಡುರಂಗ ಕೆ(ಚಾಸಾ5) ರವರ ಜೊತೆಯಲ್ಲಿ ಕೆಎ01ಜಿ6209 ಬೊಲೇರೋ ವಾಹನದಲ್ಲಿ ಕುದೂರು ಗ್ರಾಮದ ಕುದೂರು ಸರ್ಕಲ್ ನಲ್ಲಿ ಗಸ್ತು ಮಾಡುತ್ತಿರುವಾಗ ಬಾತ್ಮಿದಾರರೊಬ್ಬ ಚಾಸಾ 7 ರವರಿಗೆ ಕುದೂರು ಗ್ರಾಮದ 5ನೇ ಬ್ಲಾಕ್ ನವಗ್ರಾಮ ರಘುನಾಥ ಬಿನ್ ನರಸಿಂಹಯ್ಯ ಎಂಬ ವ್ಯಕ್ತಿ ಅಕ್ರಮವಾಗಿ ಸೇಂದಿಯನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದ ನಂತರ ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ 5ನೇ ಬ್ಲಾಕ್ ಕುದೂರು ಗ್ರಾಮಕ್ಕೆ ಹೋಗಿ ನೋಡಿದಾಗ ಒಂದು ಸಿಮೆಂಟ್ ಸೀಟಿನ ಮನೆ ಇದ್ದು ಆ ಮನೆಯು ಪೂರ್ವ ದಿಕ್ಕಿಗೆ ಬಾಗಿಲನ್ನು ಹೊಂದಿರುತ್ತದೆ. ಮನೆಯ ಮುಂಭಾಗದಲ್ಲಿ ಒಬ್ಬ

ಪುರುಷ ವ್ಯಕ್ತಿ ನಿಂತಿದ್ದು ಸಮವಸ್ತ್ರಧಾರಿಗಳಾದ ನಮ್ಮನ್ನು ನೋಡಿ ಗಾಭರಿಗೊಂಡು ಓಡಿಹೋಗಿರುತ್ತಾನೆ. ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಅಕ್ಕ ಪಕ್ಕದ ಯಾವುದೋ ಒಂದು ಮನೆಯಲ್ಲಿ ಅಡಗಿಕೊಂಡಿರುತ್ತಾನೆ. ನಂತರ ಆರೋಪಿ ಸಿಗದಿರುವ ಬಗ್ಗೆ ಮಾಹಿತಿಯನ್ನು ಚಾಸಾ7 ರವರಿಗೆ ತಿಳಿಸಿರುತ್ತೇವೆ. ನಂತರ ಸದರಿ ಮನೆಯನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ತರಲು ಕಾಲಾವಕಾಶ ಇಲ್ಲದ ಕಾರಣ ಹಾಗೂ ಸಾಕ್ಷ್ಯ ನಾಶವಾಗುವ ಸಂಭವ ಇರುವ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚಿತ ವಾರೆಂಟ್ ಅನ್ನು ತಯಾರಿಸಿಕೊಂಡು ಸ್ಥಳೀಯರನ್ನು ಪಂಚರನ್ನಾಗಿ ಬರಲು ಕೋರಲಾಗಿ ಯಾರೂ ಸಹಕರಿಸದ ಕಾರಣ ಇಲಾಖಾ ಪಂಚರನ್ನಾಗಿ ನಾನು ಮತ್ತು ಚಾಸಾ 1 ರವರು ಪಂಚರಾಗಲು ಒಪ್ಪಿ ನೋಟೀಸನ್ನು ಪಡೆದುಕೊಂಡಿರುತ್ತೇವೆ. ನಂತರ ಮನೆಯನ್ನು ಶೋಧನೆ ಮಾಡಲಾಗಿ ಮನೆಯ ಎಡಭಾಗಕ್ಕೆ ಸ್ನಾನದ ಕೋಣೆ ಇರುವುದು ಮತ್ತು ಮನೆಯ ಎಡಭಾಗಕ್ಕೆ ಅಡುಗೆ ಕೋಣೆ ಇರುವುದು ಕಂಡು ಬಂದಿರುತ್ತದೆ. ಮನೆಯ ಹಾಲ್ ನಲ್ಲಿ ಪಶ್ಚಿಮ ದಿಕ್ಕಿಗೆ ಒಂದು ರೂಂ ಇದ್ದು ಸದರಿ ರೂಂನಲ್ಲಿ ಒಂದು ಮರದ ಮಂಚ ಇದ್ದು ಮಂಚದ ಕೆಳಗೆ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇರುವುದು ಕಂಡು ಬಂದಿರುತ್ತದೆ. ಪ್ಲಾಸ್ಟಿಕ್ ಚೀಲದ ಮೇಲೆ ನಂದಿನಿ ಗೋಲ್ಡ್ ಪಶು ಆಹಾರ ಎಂದು ನಮೂದಿಸಿರುತ್ತದೆ. ನಂತರ ಸದರಿ ಪ್ಲಾಸ್ಟಿಕ್ ಚೀಲವನ್ನು ಬಿಚ್ಚಿ ನೋಡಲಾಗಿ ಪಾರದರ್ಶಕವುಳ್ಳ 24 ಪ್ಲಾಸ್ಟಿಕ್ ಬಾಟೆಲಗಳು ಇರುವುದು ಕಂಡು ಬಂದಿರುತ್ತದೆ. ಸದರಿ ಪ್ರತಿಯೊಂದು ಬಾಟೆಲುಗಳು 1 ಲೀ. ಸಾಮರ್ಥ್ಯವನ್ನು ಹೊಂದಿದ್ದಾಗಿರುತ್ತದೆ. ಸದರಿ ಪ್ಲಾಸ್ಟಿಕ್ ಬಾಟೆಲ್ ಒಳಗಡೆ ಬಿಳಿ ಬಣ್ಣದ ದ್ರಾವ ದಿಂದ ಕೂಡಿರುತ್ತದೆ. ಪ್ಲಾಸ್ಟಿಕ್ ಬಾಟೆಲ್ ನ ಮುಚ್ಚಳವನ್ನು ತೆಗೆದು ನೋಡಲಾಗಿ ಬಿಳಿ ಬಣ್ಣದ ನೊರೆ ಹಾಗೂ ಉಳಿ ವಾಸನೆ ಕಂಡುಬಂದಿರುತ್ತದೆ. ಇದು ಕಲಬೆರಕೆಯಿಂದ ಕೂಡಿದ ಸೆಂಧಿ ಎಂದು ಖಚಿತ ಪಡಿಸಿಕೊಳ್ಳಲಾಯಿತು. ಸದರಿ ಸೆಂಧಿಯಲ್ಲಿ 1 ಲೀಟರ್ ಸಾಮರ್ಥ್ಯವುಳ್ಳ 3 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿ ಮೈಸೂರು 21 ಬಿ ಸೀಲನ್ನು ಹಾಕಲಾಯಿತು. ಸದರಿ ಮನೆಯ ಚೆಕ್ಕುಬಂಧಿ ಪೂರ್ವಕ್ಕೆ ಸರ್ಕಾರಿ ಸಿಮೆಂಟ್ ರಸ್ತೆ, ಪಶ್ಚಿಮಕ್ಕೆ

ಇಮ್ತಿಯಾಜ್ ಉನ್ನೀಸಾ ರವರಿಗೆ ಸೇರಿದ ವಾಸದ ಮನೆ, ಉತ್ತರಕ್ಕೆ ಚಿಕ್ಕರಾಜುರವರಿಗೆ ಸೇರಿದ ವಾಸದ ಮನೆ ಹಾಗೂ ದಕ್ಷಿಣಕ್ಕೆ ಮಲ್ಲೇಶಪ್ಪ ಬಿನ್ ರುದ್ರಪ್ಪ ರವರಿಗೆ ಸೇರಿದ ವಾಸದ ಮನೆ. ನಂತರ ಓಡಿಹೋದ ಆರೋಪಿಯನ್ನು ತನಿಖಾ ಕಾಲದಲ್ಲಿ ಪತ್ತೆಹಚ್ಚುವುದಾಗಿ ತಿಳಿಯಪಡಿಸಿರುತ್ತದೆ. ಸದರಿ ಮಹಜನರನ್ನು ಸಂಜೆ 6.30 ಕ್ಕೆ ಪ್ರಾರಂಭಿಸಿ 7.40 ಕ್ಕೆ ಮುಕ್ತಾಯಗೊಳಿಸಲಾಯಿತು.

ಈಗ ಸಾಕ್ಷಿಗೆ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನೋಟೀಸನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಶೋಧನಾವಾರೆಂಟ್ ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ವಾರೆಂಟನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲ್ಸ್ ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಲಿಸ್ಟ್ ಆಫ್ ಆರ್ಟಿಕಲ್ಸ್ ಅನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಮಾದರಿ ಮೊಹರಿನ ನಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಾದರಿ ಮೊಹರಿನ ನಕಲನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸದರಿ ರಾಸಾಯನಿಕ ಪರೀಕ್ಷೆಗೆ ಜಪ್ತಿ ಪಡಿಸಿಕೊಂಡ 3 ಬಾಟೆಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗ ಸದರಿ 3 ಬಾಟೆಲುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಕ್ರಮವಾಗಿ ಮುದ್ದೆಮಾಲು 1 , 2 ಮತುತ 3 ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 3 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪ್ಲಾಸ್ಟಿಕ್ ಚೀಲವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಿನದಂದು ಓಡಿಹೋದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಈ ಹಂತದಲ್ಲಿ ಆರೋಪಿ ಪರ ವಕೀಲರಿಂದ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು** ಃ- **ಶ್ರೀ. ಸಿ ಕೆ ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ದಿನಾಂಕ 25.09.2023 ರಂದು ನೀವು ಎಲ್ಲಿ ಎಲ್ಲಿ ಬೇಟಿ ನೀಡಿರುತ್ತೀರಿ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ನಾವು ಮಾಗಡಿಯಿಂದ ಕುದೂರು ಕಡೆ ಹೊರಟಿದ್ದೆವು ಎಂದು ನುಡಿಯುತ್ತಾರೆ. ಮಾಗಡಿಯನ್ನು ಎಷ್ಟು ಗಂಟೆಗೆ ಬಿಟ್ಟಿರುತ್ತೀರಿ ಎಂದರೆ ಸಾಕ್ಷಿಯು ಸುಮಾರು 4.30 ಕ್ಕೆ ಎಂದು ನುಡಿಯುತ್ತಾರೆ. ಮಾಗಡಿಯಿಂದ ನೀವು ನೇರವಾಗಿ ಕದೂರಿಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಾಗಡಿಯಿಂದ ಕುದೂರಿಗೆ 20- 30 ನಿಮಿಷ ಆಗಬಹುದಾ ಎಂದರೆ ಸಾಕ್ಷಿ 40 ನಿಮಿಷ ಬೇಕು ಆದರೆ ನಾವು ಗಸ್ತು ಮಾಡಿಕೊಂಡು ಹೋಗುವುದರಿಂದ ಸ್ವಲ್ಪ ತಡ ಆಗುತ್ತದೆ ಎಂದು ನುಡಿಯುತ್ತಾರೆ. ನೀವು ಕುದೂರಿಗೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ 5.40 ಎಂದು ನುಡಿಯುತ್ತಾರೆ. ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಆಗ ಸಮಯ ಎಷ್ಟು ಆಗಿತ್ತು ಎಂದರೆ ಸಾಕ್ಷಿ ನನ್ನ ಮೇಲಾಧಿಕಾರಿಗಳಿಗೆ ಮಾಹಿತಿ ಬಂದಿದ್ದು ಅವರು ನಮಗೆ ಹೇಳಿದಾಗ 5.45 ಆಗಿತ್ತು ಎಂದು ನುಡಿಯುತ್ತಾರೆ. ನೀವು ನಿಮ್ಮ ಮೇಲಾಧಿಕಾರಿಗಳ ಜೊತೆ ಇದ್ದಿದ್ದಿರೋ ಅಥವಾ ಬೇರೆ ಕಡೆ ಇದ್ದಿದ್ದಿರೋ ಎಂದರೆ ಸಾಕ್ಷಿ ಜೊತೆಯಲ್ಲೆ ಇದ್ದೆನು ಎಂದು ನುಡಿಯುತ್ತಾರೆ.

ಮಾಹಿತಿಯನ್ನು ಫೋನ್ ಮೂಲಕ ತಿಳಿಸಿರುತ್ತಾರೋ ಅಥವಾ ಮೌಖಿಕವಾಗಿ ಹೇಳಿರುತ್ತಾರೋ ಎಂದರೆ ಸಾಕ್ಷಿ ಮೌಖಿಕಾವಾಗಿ

ಹೇಳಿರುತ್ತಾರ ಎಂದು ನುಡಿಯುತ್ತಾರೆ. ಸದರಿ ಸರ್ಕಲ್ ಜನನಿಭಿಡ ಪ್ರದೇಶ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಸರ್ಕಲ್ ನಲ್ಲಿ ಸುಮಾರು ಅಂಗಡಿಗಳು ಇದ್ದು ಯಾವಾಗಲೂ ಜನರು ಇರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮೇಲಾಧಿಕಾರಿಯವರಿಗೆ ಮಾಹಿತಿ ಬಂದ ನಂತರ ಹಾಗೂ ಸದರಿ ಮಾಹಿತಿಯನ್ನು ನಿಮಗೆ ತಿಳಿಸಿದ ನಂತರ ಸದರಿ ಸರ್ಕಲ್ ನಲ್ಲಿ ಇದ್ದಂತಹ ಜನರನ್ನು ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ಕಲ್ ನಿಂದ ನವಗಾಮಕ್ಕೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿಯು 1- 1 ½ ಕಿ.ಮೀ.ಎಂದು ನುಡಿಯುತ್ತಾರೆ. ಸದರಿ ಸರ್ಕಲ್ ನಿಂದ ನವಗ್ರಾಮದ ವರೆಗೂ ಡಾಂಬರ್ ರಸ್ೆ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ.ಸರ್ಕಲ್ ನಿಂದ ನವಗ್ರಾಮಕ್ಕೆ ಹೋಗಲು 5 ನಿಮಿಷ ಬೇಕಾ ಎಂದರೆ ಸಾಕ್ಷಿ 5-8 ನಿಮಿಷ ಎಂದು ನುಡಿಯುತ್ತಾರೆ. ಸರ್ಕಲ್ ನಿಂದ ನೀವು ನೇರ ನವಗ್ರಾಮಕ್ಕೆ ಹೋಗಿರುತ್ತೀರೋ ಅಥವಾ ಬೇರೆ ಕಡೆ ಹೋಗಿುರುತ್ತೀರೋ ಎಂದರ ಸಾಕ್ಷಿ ನೇರ ನವಗ್ರಾವಕ್ಷ್ಕೆ ಹೋಗಿರುತ್ತೇವೆ ಎಂದು ನುಡಿಯತ್ತಾರೆ. ನವಗ್ರಾಮಕ್ಕೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ 5.50 ಎಂದ ನುಡಿಯುತ್ತಾರೆ. ನವಗ್ರಾಮಕ್ಕೆ ಹೋಗುವ ದಾರಿಯಲ್ಲಿ ವೈನ್ ಸ್ಟೋರ್ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನವಗ್ರಾಮದಲ್ಲಿ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿಯು 30-40 ಎಂದು ನುಡಿಯುತ್ತಾರೆ. ಅದೇ ರೀತಿ 200-300 ವಾಸದ ಜನರೂ ಇದ್ದಾರೆ ಎಂದರೆ ಸಾಕ್ಷಿ ಜನರು ಇದ್ದಾರೆ ಆದರೆ ಎಷ್ಟು ಎಂದು ನಿಖರವಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಒಂದು ಅಂಗನವಾಡಿ ಕೇಂದ್ರ ಇದೆ ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯನ್ನು ನೀವು ಎಷ್ಟು ಗಂಟೆಗೆ ನೋಡಿರುತ್ತೀರಿ ಎಂದರೆ ಸಾಕ್ಷಿಯು 5.55 ಕ್ಕೆ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ಮನೆಯಲ್ಲಿ ವಾಸ ಇದ್ದನು ಎಂದು ಹೇಳಿದ್ದು ಅವರ ಮನೆಯವರು ಇದ್ದಿದ್ದರ ಎಂದರೆ ಸಾಕ್ಷಿ ಆರೋಪಿಯ ಕುಟುಂಬದವರು ಇದ್ದಿದ್ದರು ಎಂದು

ನುಡಿಯುತ್ತಾರೆ. ನೀವು ಸದರಿ ಮನೆಗೆ ಹೋದಾಗ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ ಇಬ್ಬರು ಎಂದು ನುಡಿಯುತ್ತಾರೆ. ನೀವು ಆರೋಪಿಯನ್ನು ಹಿಡಿಯಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿ ಪ್ರಯತ್ನ ಪಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಮನೆಯವರಿಗೆ ಆರೋಪಿಯನ್ನು ಹಿಡಿದುಕೊಡಿ ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು ಎಂದು ಹೇಳಿದ್ದು ಸದರಿ ಚೀಲ ನ್ಯಾಯಾಲಯದ ಮುಂದೆ ಇದೆಯ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 24ಬಾಟೆಲುಗಳು ಇದ್ದವು ಎಂದು ಹೇಳಿದ್ದು ನ್ಯಾಯಾಲಯದಲ್ಲಿ 3 ಬಾಟೆಲುಗಳು ಇದ್ದು ಉಳಿದ ಬಾಟೆಲುಗಳು ಏನು ಆಗಿರುತ್ತವೆ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ನಾನು ಕಛೇರಿಗೆ ಬಂದು ಕೊಡುತ್ತೇವೆ ಅದನ್ನು ಇಲಾಖಾ ವಶಕ್ಕ ನೀಡಲಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರು ರಘುನಾಥ ಬಿನ್ ನರಸಿಂಹಯ್ಯ ಎಂದು ನಿಮಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಬಾತ್ಮಿದಾರರು ಎಂದು ನುಡಿಯುತ್ತಾರೆ. ಆರೋಪಿಯ ಹೆಸರು ಏನು ಎಂದು ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ವಿಚಾರಿಸಿರುತ್ತೇವೆ ಎಂದು ನುಡಿಯುತ್ತಾರೆ.

ಪಶ್ಚಿಮಕ್ಕೆ ಇಮ್ತಿಯಾಜ್ ಉನ್ನೀಸಾ ರವರಿಗೆ ಸೇರಿದ ವಾಸದ ಮನೆ, ಉತ್ತರಕ್ಕೆ ಚಿಕ್ಕರಾಜುರವರಿಗೆ ಸೇರಿದ ವಾಸದ ಮನೆ ಹಾಗೂ ದಕ್ಷಿಣಕ್ಕೆ ಮಲ್ಲೇಶಪ್ಪ ಬಿನ್ ರುದ್ರಪ್ಪ ರವರಿಗೆ ಸೇರಿದ ವಾಸದ ಮನೆ ಎಂದು ಹೇಳಿದ್ದು ಅದನ್ನು ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿಯು ನಾವು ತಿಳಿದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಎಲ್ಲಾ ನಿಮ್ಮ ಇಲಾಖಾ ಅಧಿಕಾರಿಗಳು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಹಜರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿ ನಾನೆ ಎಂದು ನುಡಿಯುತ್ತಾರೆ. ಸ್ಥಳದ ಕಚ್ಚಾ ನಕಾಶೆ ತಯಾರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ಥಳದ ಪೋಟೋ ಹಾಗೂ ವೀಡಿಯೋ ತೆಗೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಆರೋಪಿಯು ಅಕ್ರಮವಾಗಿ ಯಾವುದೇ ಸೇಂಧಿ ಮಾರಾಟ ಮಾಡುತ್ತಿದ್ದಿರಲಿಲ್ಲ ನೀವು ನಿಮ್ಮ ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಆರೋಪಿಯನ್ನು ನೀವು ಕಂಡಿರುವುದಿಲ್ಲ ಹಾಗೂ ಆರೋಪಿಯು ನಿಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಪ್ಲಾಸ್ಟಿಕ್ ಚೀಲದಲ್ಲಿ ಯಾವುದೇ ಸೇಂಧಿ ಇದ್ದಿರಲಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಮೇಲಾಧಿಕಾರಿಗಳು ಸೇರಿ ಸದರಿ 1 ರಿಂದ 3ರ ಮುದ್ದೆಮಾಲುಗಳನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನಡಿಯುತ್ತಾರೆ. ನೀವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಮಹಜರನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ಮುದ್ದೆ ಮಾಲುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**